# ನೀವೂ ಅಭಿನಂದನ್ ಆಗಿ!

■ **ಶಶಿಕಕುಮಾರ್ ಸಿ.**




ಗೇಮಿಂಗ್ ಆ್ಯಪ್‌ಗಳ ರೋಮಾಂಚನಕಾರಿ ಅನುಭವದಿಂದಾಗಿಯೇ ದೇಶದ ಯುವಜನತೆ ಗೇಮಿಂಗ್ ಕ್ಷೇತ್ರದತ್ತ ಹೆಚ್ಚು ಆಕರ್ಷಿತಗೊಂಡಿದೆ. ಈ ಹಿನ್ನೆಲೆಯಲ್ಲಿ ಯುವಜನತೆಯನ್ನು ತಲುಪಲು ಹಾಗೂ ಅವರನ್ನು ತಮ್ಮ ಕ್ಷೇತ್ರದತ್ತ ಸೆಳೆಯಲು ಉದ್ದೇಶಿಸಿರುವ ಭಾರತೀಯ ವಾಯುಪಡೆಯು ಗೇಮಿಂಗ್ ಆ್ಯಪ್ ಅನ್ನು ಈಚೆಗೆ ಬಿಡುಗಡೆಗೊಳಿಸಿದೆ.

'ಇಂಡಿಯನ್ ಏರ್ ಫೋರ್ಸ್: ಎ ಕಟ್ ಎಬೌವ್' (Indian Air Force: A Cut Above) ಎಂಬುದು ಆ ಗೇಮಿಂಗ್ ಆ್ಯಪ್‌ನ ಹೆಸರು. ಇದು ಭಾರತೀಯ ವಾಯುಪಡೆಯ ಅಧಿಕೃತ ಗೇಮಿಂಗ್ ಆ್ಯಪ್ ಆಗಿದ್ದು, ವಿಮಾನದಲ್ಲಿ ಕೂತು ಶತ್ರುಗಳನ್ನು ಸದೆಬಡಿಯುವ ಅನುಭವ ನೀಡುತ್ತದೆ. ಬಳಕೆದಾರರು ವಿಂಗ್ ಕಮಾಂಡರ್ ಅಭಿನಂದನ್ ವರ್ಧಮಾನ್ ಆಗಿ ಪಾಲ್ಗೊಳ್ಳುವ ಅವಕಾಶವನ್ನು ಇದರಲ್ಲಿ ಕಲ್ಪಿಸಲಾಗಿದೆ.

ಭಾರತೀಯ ರಕ್ಷಣಾ ಇಲಾಖೆಯ ಮೊದಲ ಗೇಮಿಂಗ್ ಆ್ಯಪ್ ಇದಾಗಿದ್ದು, ಈಚೆಗೆ ಪಾಕಿಸ್ತಾನದ ಮೇಲೆ ಭಾರತೀಯ ವಾಯುಪಡೆಯ ವಿಂಗ್ ಕಮಾಂಡರ್ ಅಭಿನಂದನ್ ಮಾಡಿದ ವಾಯುದಾಳಿಯೇ ಇದಕ್ಕೆ ಸ್ಫೂರ್ತಿ. ಆ್ಯಂಡ್ರಾಯ್ಡ್ ಆಪರೇಟಿಂಗ್ ಸಿಸ್ಟಂ ಹಾಗೂ ಐಒಎಸ್ (ಐಫೋನ್ ಆಪರೇಟಿಂಗ್ ಸಿಸ್ಟಂ) ಆಧಾರಿತ ಮೊಬೈಲ್ ಬಳಕೆದಾರರಿಗೆ ಮಾತ್ರ ಈ ಆ್ಯಪ್ ಲಭ್ಯವಿದೆ.

ವಾಯುಪಡೆಯ ಬಗ್ಗೆ ಜಾಗೃತಿ ಮೂಡಿಸಲು ಹಾಗೂ ವಾಯುಪಡೆ ಸೇರುವಂತೆ ಪ್ರೋತ್ಸಾಹಿಸುವ ಸದುದ್ದೇಶದಿಂದ ಈ ಡಿಜಿಟಲ್ ಆಟವನ್ನು ಅಭಿವೃದ್ಧಿಗೊಳಿಸಲಾಗಿದೆ. ವಾಯುಪಡೆಯಲ್ಲಿ ಸದ್ಯ ಬಳಕೆಯಲ್ಲಿರುವ ಫೈಟರ್ ಜೆಟ್‌ಗಳು ಹಾಗೂ ವಿಮಾನಗಳ ಚಿತ್ರಣ ಇದರಲ್ಲಿದ್ದು, ಸುಖೋಯ್, ಮಿಗ್ 17 ಹೆಲಿಕಾಪ್ಟರ್‌ಗಳು ಇವೆ. ಆಕಾಶದಲ್ಲೇ ಇಂಧನ ತುಂಬುವ ಟ್ಯಾಂಕರ್ ಇದ್ದು ಇಂಧನ ತುಂಬಿಸುವ ಪ್ರಕ್ರಿಯೆಯು ರೋಮಾಂಚನಕಾರಿ ಅನುಭವವನ್ನು ನೀಡುತ್ತದೆ. ವಿವಿಧ ತರಹದ ಆಟದ ಮಾದರಿಗಳು ಇದರಲ್ಲಿವೆ.

ವಿಮಾನದ ಪೈಲೆಟ್ ರೂಪದಲ್ಲಿ ವಿಂಗ್ ಕಮಾಂಡರ್ ಅಭಿನಂದನ್ ಕಾಣಿಸಿಕೊಂಡಿರುವುದು ಇದರ ಮತ್ತೊಂದು ವಿಶೇಷ. ಆ್ಯಪ್‌ನಲ್ಲಿ ಯುದ್ಧ ಹಾರಿಸುವ ಮುನ್ನ ತನ್ನ ಹೆಸರು ನಮೂದಿಸಬೇಕಿರುತ್ತದೆ. ಹೀಗಾಗಿ, ಸ್ವಯಂಚಾಲಿತವಾಗಿ ಅಭಿನಂದನ್ ಅವರ ಹೆಸರೇ ಅಲ್ಲಿ ಕಾಣಿಸಿಕೊಳ್ಳುತ್ತದೆ. ಅವರ ಹೆಸರು ಇಷ್ಟವಿಲ್ಲದಿದ್ದರೆ ಹೆಸರು ಬದಲಿಸುವ ಅವಕಾಶವೂ ಇದೆ. ಸದ್ಯಕ್ಕೆ ಸಿಂಗಲ್ ಪ್ಲೇಯರ್ ಮೋಡ್‌ನಲ್ಲಿ ಮಾತ್ರ ಅಭಿನಂದನ್ ಕಾಣಿಸಿಕೊಳ್ಳಲಿದ್ದು, ಮುಂದಿನ ದಿನಗಳಲ್ಲಿ ಮಲ್ಟಿ ಪ್ಲೇಯರ್ (ಹಲವು ಆಟಗಾರರು ಏಕಕಾಲದಲ್ಲಿ ಗುಂಪಿನಲ್ಲಿ ಆಡಲು) ಮೋಡ್ ಬಿಡುಗಡೆಗೊಳಿಸುವುದಾಗಿ ಭಾರತೀಯ ವಾಯುಪಡೆ ಹೇಳಿದೆ.

ಪುಲ್ವಾಮ ದಾಳಿಗೆ ಪ್ರತೀಕಾರವಾಗಿ ಭಾರತೀಯ ವಾಯುಪಡೆಯು ಪಾಕಿಸ್ತಾನ ಆಕ್ರಮಿತ ಪ್ರದೇಶದಲ್ಲಿದ್ದ ಉಗ್ರರ ಮೇಲೆ ವಾಯುದಾಳಿ ನಡೆಸಿತ್ತು. ಅದರಲ್ಲಿ ಮಿಗ್ 21 ವಿಮಾನವೂ ಭಾಗಿಯಾಗಿತ್ತು. ಆ ವಿಮಾನದ ಪೈಲೆಟ್ ಆಗಿದ್ದ ಅಭಿನಂದನ್ ಪಾಕಿಸ್ತಾನದ ಬಲಿಷ್ಠ ಎಫ್–16 ಯುದ್ಧವಿಮಾನವನ್ನು ಹೊಡೆದುರುಳಿಸಿದ್ದರು. ■




## ಡಿಜಿಟಲ್ ಸಹಾಯಕ್ಕೆ ಜಿಯೋ ಸಾರ್ಥಿ

ಡಿಜಿಟಲ್ ರೀಚಾರ್ಜ್ ಮಾಡಲು ರಿಲಯನ್ಸ್ ಜಿಯೋ ಬಳಕೆದಾರರಿಗೆ ಕಂಪನಿಯು 'ಜಿಯೋ ಸಾರ್ಥಿ' ಎಂಬ ಹೊಸ ಫೀಚರ್ ಅನ್ನು ಬಿಡುಗಡೆ ಮಾಡಿದೆ. ರಿಲಯನ್ಸ್ ಜಿಯೋ ಬಳಕೆದಾರರು ಇನ್ನು ಮುಂದೆ ಹೊಸದಾಗಿ ಆನ್‌ಲೈನ್ ರೀಚಾರ್ಜ್ ಅಥವಾ ಯಾವುದೇ ಡಿಜಿಟಲ್ ಪಾವತಿ ಸೇವೆ ಪಡೆಯಲು ಜಿಯೋ ಸಾರ್ಥಿ ನೆರವು ಪಡೆಯಬಹುದಾಗಿದ್ದು, ಅದಕ್ಕಾಗಿ ಮೈಜಿಯೋ ಆ್ಯಪ್‌ನ ಅಪ್‌ಡೇಟೆಡ್ ವರ್ಶನ್ ಅನ್ನು ಡೌನ್‌ಲೋಡ್ ಮಾಡಿಕೊಳ್ಳಬೇಕಿದೆ.

ಮೈಜಿಯೋ ಆ್ಯಪ್‌ನಲ್ಲಿ ಜಿಯೋ ಸಾರ್ಥಿ ಡಿಜಿಟಲ್ ಅಸಿಸ್ಟೆಂಟ್ ಫೀಚರ್ ಲಭ್ಯವಿದ್ದು, ಆನ್‌ಲೈನ್/ಡಿಜಿಟಲ್ ರೀಚಾರ್ಜ್ ಮಾಡಲು ಬಯಸುವವರಿಗೆ ಇದು ಹೆಚ್ಚು ಅನುಕೂಲ. ಆ್ಯಪ್ ಅನ್ನು ತೆರೆದು ಪರದೆ ಮೇಲೆ ಕಾಣುವ ರಿಚಾರ್ಜ್ ಆಯ್ಕೆಯನ್ನು ಕ್ಲಿಕ್ಕಿಸಿದರೆ ಮೊಬೈಲ್ ರೀಚಾರ್ಜ್‌ನ ವಿವಿಧ ಯೋಜನೆಗಳು ತೆರೆದುಕೊಳ್ಳುತ್ತವೆ. ಅವುಗಳ ಪೈಕಿ ಬಳಕೆದಾರರಿಗೆ ಇಷ್ಟವಾದ ಯೋಜನೆಯನ್ನು ಆಯ್ಕೆ ಮಾಡಿಕೊಳ್ಳಬೇಕು.

ಬಳಿಕ ಜಿಯೋ ಸಾರ್ಥಿ ಯಾವ ರೀತಿ ರೀಚಾರ್ಜ್ ಮಾಡಬೇಕು, ಯಾವ ಮಾಹಿತಿಯನ್ನು ನಮೂದಿಸಬೇಕು ಎಂಬುದನ್ನು ಧ್ವನಿಯ ಮೂಲಕ ಹೇಳಬೇಕು. ಬಳಕೆದಾರರ ಧ್ವನಿಯನ್ನು ಗ್ರಹಿಸಿ ರೀಚಾರ್ಜ್ ಮಾಡಲು ಸಾರ್ಥಿ ಸಹಾಯ ಮಾಡುತ್ತದೆ. ಇಂಗ್ಲಿಷ್ ಮತ್ತು ಹಿಂದಿಯಲ್ಲಿ ಮಾತ್ರ ಧ್ವನಿಯನ್ನು ಮಾತ್ರ ಸಾರ್ಥಿ ಗ್ರಹಿಸುವ ಶಕ್ತಿ ಹೊಂದಿದ್ದು, ಮುಂದಿನ ದಿನಗಳಲ್ಲಿ ದೇಶದ ಪ್ರಮುಖ 12 ಪ್ರಾಂತೀಯ ಭಾಷೆಗಳಿಗೂ ಈ ಸೇವೆ ವಿಸ್ತಾರಗೊಳ್ಳಲಿದೆ.

ರಿಲಯನ್ಸ್ ಜಿಯೋ ಆ್ಯಪ್ ಬಳಸಿ ಈಗಾಗಲೇ ಆನ್‌ಲೈನ್ ರೀಚಾರ್ಜ್ ಮಾಡಿದ್ದರೆ, ಆ್ಯಪ್‌ನಲ್ಲಿ ಸಾರ್ಥಿ ಸೇವೆ ಕಾಣಿಸಿಕೊಳ್ಳುವುದಿಲ್ಲ. ಪ್ರಸ್ತುತ ರೀಚಾರ್ಜ್ ಸಂಬಂಧಿತ ನೆರವನ್ನು ಮಾತ್ರ ನೀಡುತ್ತಿರುವ ಸಾರ್ಥಿಯು ಮುಂದಿನ ದಿನಗಳಲ್ಲಿ ನಾನಾ ಕಾರ್ಯಗಳಲ್ಲೂ ಸಹಾಯಕ್ಕೆ ಬರಲಿದೆ. ■